FEBRUARY 16, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ಮಲೆನಾಡಿನ ಮಂಗನ ಕಾಯಿಲೆ; ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ, ಲಸಿಕೆ ಸಂಶೋಧನೆ, ಪ್ರಗತಿಯಲ್ಲಿ.
- 'ಹೆಣ್ಣು ಮಗು ಉಳಿಸಿ, ಮಗಳನ್ನು ಓದಿಸಿ' ಕೇಂದ್ರ ಪುರಸ್ಕೃತ ಯೋಜನೆಗೆ, ದಶಕ ಪೂರ್ಣ.
- ಲೋಕಾಯುಕ್ತಕ್ಕೆ, ಕಳೆದ 2 ವರ್ಷಗಳಲ್ಲಿ, 23 ಸಾವಿರ ದೂರುಗಳ ಸಲ್ಲಿಕೆ.
- 23 ರಂದು, ಗುಲ್ಬರ್ಗಾ ವಿಶ್ವವಿದ್ಯಾಲಯದ, ಅಂಬೇಡ್ಕರ್ ಭವನದಲ್ಲಿ, ರಾಷ್ಟ್ರೀಯ ಸಂಗೀತ, ನೃತ್ಯ ಮಹೋತ್ಸವ.

<><><>

ಈಗ ವಾರ್ತೆಗಳ ವಿವರ

<><><>

ಸಾಲ ಪಡೆದವರಿಗೆ ಕಿರುಕುಳ ಅಥವಾ ಮಾನಹಾನಿ ಉಂಟಾಗಬಾರದು ಎಂಬ ಉದ್ದೇಶದಿಂದ, ಹೊಸ ಕಾಯ್ದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲಾಗಿದೆ; ಎಲ್ಲ ಜಿಲ್ಲೆಗಳಲ್ಲಿ ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ. ಮೈಕ್ರೋ ಫೈನಾನ್ಸ್‌ಗಳ, ಕಾನೂನು ಬಾಹಿರ ನಡಾವಳಿ ನಿಯಂತ್ರಣ ಸಂಬಂಧ, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ, ವಿಡಿಯೋ ಸಂವಾದ ನಡೆಸಿದರು. ಎಲ್ಲ ಜಿಲ್ಲೆಗಳಲ್ಲಿ ಸಹಾಯವಾಣಿ ಪ್ರಾರಂಭಿಸಲಾಗಿದ್ದು, ಬಲವಂತದ ಸಾಲ ವಸೂಲಾತಿ ಪ್ರಕರಣಗಳಲ್ಲಿ, ಸ್ವಯಂಪ್ರೇರಿತವಾಗಿ ಮೊಕದ್ದಮೆ ದಾಖಲಿಸುವಂತೆ, ಅವರು ಸೂಚಿಸಿದರು.

<><><>

ಕ್ಯಾಸನೂರ್ ಫಾರೆಸ್ಟ್ ಡಿಸೀಸ್ ಕೆ.ಎಫ್.ಡಿ. ಮಂಗನ ಕಾಯಿಲೆ ನಿಯಂತ್ರಿಸಲು, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ – ಐ.ಸಿ.ಎಂ.ಆರ್. ಜೊತೆ, ಚರ್ಚೆ ನಡೆಸಲಾಗಿದ್ದು, 2026ರ ವೇಳೆಗೆ ಸೂಕ್ತ ಲಸಿಕೆ ಲಭ್ಯವಾಗಲಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ್ ತಿಳಿಸಿದ್ದಾರೆ.

ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಈ ವಿಷಯ ಪ್ರಕಟಿಸಿರುವ ಸಚಿವರು, ರಾಜ್ಯದ ಮಲೆನಾಡು ಭಾಗದಲ್ಲಿ, ಮಂಗನ ಕಾಯಿಲೆ ನಿಯಂತ್ರಣಕ್ಕೆ ಹಾಗೂ ಸೋಂಕಿತರ ಸೂಕ್ತ ಚಿಕಿತ್ಸೆಗೆ, ವ್ಯವಸ್ಥೆ ಕೈಗೊಳ್ಳಲಾಗಿದೆ ಎಂದಿದ್ದಾರೆ.

<><><>

ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲೂಕಿನಲ್ಲಿ 12 ಮಂಗನ ಕಾಯಿಲೆ ಪ್ರಕರಣ ಪತ್ತೆಯಾಗಿವೆ. ಹೆದ್ದೂರನ್ನು ಕೆ.ಎಫ್.ಡಿ. ಕಾಯಿಲೆಗೆ, ಹಾಟ್‌ಸ್ಪಾಟ್ ಆಗಿ ಗುರುತಿಸಲಾಗಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ನಟರಾಜ ತಿಳಿಸಿದ್ದಾರೆ.

<><><>

ಚಿಕ್ಕಮಗಳೂರು ಜಿಲ್ಲೆಯ, ಕೊಪ್ಪ ಹಾಗೂ ಎನ್.ಆರ್ ಪುರ ತಾಲೂಕಿನಲ್ಲಿ, 14 ಜನರಲ್ಲಿ ಮಂಗನ ಕಾಯಿಲೆ ಸೋಂಕು ಪತ್ತೆಯಾಗಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಅಶ್ವತ್ಥ ಬಾಬು ತಿಳಿಸಿದ್ದಾರೆ. ಕೊಪ್ಪ ಹಾಗೂ ಎನ್.ಆರ್.ಪುರ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ, ಸೋಂಕಿತರ ವಿಶೇಷ ಹಾಗೂ ಉಚಿತ ಚಿಕಿತ್ಸೆಗಾಗಿ, ಪ್ರತ್ಯೇಕ ವಾರ್ಡ್ ಸಿದ್ಧ ಪಡಿಸಲಾಗಿದೆ. 11 ಜನ ಗುಣಮುಖರಾಗಿದ್ದು, 7 ಜನರಿಗೆ ಚಿಕಿತ್ಸೆ ಮುಂದುವರಿದಿದೆ. ಒಟ್ಟು ಸೋಂಕಿತರ ಸಂಖ್ಯೆ 18ಕ್ಕೆ ಏರಿಕೆಯಾಗಿದೆ.

<><><>

ಧಾರವಾಡ ಮಾನಸಿಕ ಆರೋಗ್ಯ ಹಾಗೂ ನರ ವಿಜ್ಞಾನಗಳ ಸಂಸ್ಥೆ – 'ಡಿಮ್ಹಾನ್ಸ್' ನ ಸಹಯೋಗದಲ್ಲಿ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಉಪಶಮನ ಆರೈಕೆ ಪ್ರಕಲ್ಪ, ಡಾಕ್ಟರ್ ಮೋಹನ್‌ಕುಮಾರ ತಂಬದ್ ನೇತೃತ್ವದಲ್ಲಿ, 120 ಜನರಿಗೆ ಧಾರವಾಡ ನಗರದಲ್ಲಿ ಉಪಶಮನ ಆರೈಕೆ ಸೇವೆ ತಲುಪುತ್ತಿದೆ.

<><><>

ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆಯ, ಸರಗೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ, ಉನ್ನತ ಶಿಕ್ಷಣಕ್ಕಾಗಿ, ವಿವೇಕ ಸ್ಕಾಲರ್ ಪ್ರೋಗ್ರಾಮ್ ಅಡಿ, ಶಿಷ್ಯವೇತನ ಪಡೆದ, 150 ವಿದ್ಯಾರ್ಥಿಗಳು, ಉಪಶಮನ ಆರೈಕೆಗೆ 25 ಸಾವಿರ ರೂಪಾಯಿ ದೇಣಿಗೆ ನೀಡಿ, ಮಾದರಿಯಾಗಿದ್ದಾರೆ.

<><><>

ದಾವಣಗೆರೆಯ ಶ್ಯಾಮನೂರು ಶಿವಶಂಕರಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ದ್ವಿತೀಯ ವರ್ಷದ ಎಂ.ಬಿ.ಬಿ.ಎಸ್ ಓದುತ್ತಿರುವ, ರವಿ ಕೊಟಬಾಗಿ, ಧಾರವಾಡದ ಎಸ್.ಡಿ.ಎಂ. ಇಂಜಿನಿಯರಿಂಗ್ ಕಾಲೇಜಿನಲ್ಲಿ, 3ನೇ ವರ್ಷದ ಬಿ.ಇ ಓದುತ್ತಿರುವ ಪಲ್ಲವಿ ಬೆಟಗೇರಿ, ತಮ್ಮ ಸ್ನೇಹಿತರ ಸಹಕಾರದೊಂದಿಗೆ, ಉಪಶಮನ ಆರೈಕೆಗೆ ನೆರವಾಗಿ, ಮಾನವೀಯತೆ ಮೆರೆದಿದ್ದಾರೆ.

<><><>

ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಹುಬ್ಬಳ್ಳಿಯ ಜೈನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ, ಗಣಕಯಂತ್ರ ವಿಜ್ಞಾನದಲ್ಲಿ, ಬಿ.ಇ. ದ್ವಿತೀಯ ವರ್ಷ ಓದುತ್ತಿರುವ ಸೇಜಲ್ ಮಾಳದಕರ.

<><><>

ಸೇಜಲ್ ಮಾಳದಕರ ಧ್ವನಿ 35 ಸೆಕೆಂದುಗಳು

<><><>

ಲಿಂಗ ಅಸಮಾನತೆ ಹೋಗಲಾಡಿಸಲು, 'ಹೆಣ್ಣು ಮಕ್ಕಳನ್ನು ಉಳಿಸಿ, ಹೆಣ್ಣು ಮಕ್ಕಳನ್ನು ಓದಿಸಿ' ಕೇಂದ್ರ ಪುರಸ್ಕೃತ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು, ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ.

'ಬೇಟಿ ಬಚಾವೋ, ಬೇಟಿ ಪಢಾವೋ' ಯೋಜನೆ ಅನುಷ್ಠಾನಗೊಂಡು, 10 ವರ್ಷಗಳು ಪೂರ್ಣಗೊಂಡ ಹಿನ್ನೆಲೆ, ಉಡುಪಿಯ ಮಣಿಪಾಲ ರಜತಾದ್ರಿಯ, ವಿ.ಎಸ್. ಆಚಾರ್ಯ ಸಭಾ ಭವನದಲ್ಲಿ, ಕಾರ್ಯಾಗಾರಕ್ಕೆ ಚಾಲನೆ ನೀಡಿ, ಮಾತನಾಡಿದರು. ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ, ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ, ಜೀತ ಪದ್ಧತಿ, ವೇಶ್ಯಾ ವಾಟಿಕೆ, ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ, ನಾಗರಿಕ ಸಮಾಜಕ್ಕೆ ಕಳಂಕ. ಸಾಮುದಾಯಿಕ ಸಹಭಾಗಿತ್ವದಲ್ಲಿ, ಸಂಘಟಿತ ಪ್ರಯತ್ನವೊಂದೇ ದಾರಿ, ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ರಾಷ್ಟ್ರೀಯ ಸೇವಾ ಯೋಜನೆ, ಜ್ಞಾನ, ಸೇವೆ, ಕ್ರಿಯೆ ಹಾಗೂ ಭಾವ ಶಕ್ತಿಯನ್ನು, ಸ್ವಯಂಸೇವಕರಲ್ಲಿ ತುಂಬಿ, ಯುವಜನತೆಯಲ್ಲಿ ಮಾನವೀಯ ಮೌಲ್ಯಗಳನ್ನು ಮೈಗೂಡಿಸುತ್ತದೆ ಎಂದು, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಹೇಳಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು ನವನಗರದ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ, ಐದು ದಿನಗಳ ಕಾಲ ನಡೆದ, ಎನ್.ಎಸ್.ಎಸ್. ಅಧಿಕಾರಿಗಳ ರಾಜ್ಯ ಮಟ್ಟದ ತರಬೇತಿ ಶಿಬಿರದ, ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಕಳೆದ 2 ವ ರ್ಗಗಳಲ್ಲಿ ಲೋಕಾಯುಕ್ತಕ್ಕೆ 23 ಸಾವಿರ ದೂರುಗಳು ಸಲ್ಲಿಕೆಯಾಗಿವೆ. ಇದು ಚಿಂತನಾರ್ಹ ಸಂಗತಿ. ಭ್ರಷ್ಟಾಚಾರ ವ್ಯವಸ್ಥೆಯನ್ನು ಅಧೋಗತಿಗೆ ತಳ್ಳುತ್ತದೆ ಎಂದರು.

<><><>

ರಾಜ್ಯ ಸಂಗೀತ ನೃತ್ಯ ಅಕಾದೆಮಿಯಿಂದ, 23ನೇ ತಾರೀಖು, ಬೆಳಗ್ಗೆ 10 ಗಂಟೆಗೆ, ಕಲಬುರಗಿಯ ಗುಲ್ಬರ್ಗಾ ವಿಶ್ವವಿದ್ಯಾಲಯದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ, ರಾಷ್ಟ್ರೀಯ ಸಂಗೀತ ಮತ್ತು ನೃತ್ಯ ಮಹೋತ್ಸವ ಆಯೋಜಿಸಲಾಗಿದೆ ಎಂದು, ಅಕಾದೆಮಿ ಅಧ್ಯಕ್ಷೆ ಶುಭಾ ಧನಂಜಯ ತಿಳಿಸಿದ್ದಾರೆ. ಕನ್ನಡ ಭವನದ, ಸಂಗೀತ ನೃತ್ಯ ಅಕಾದೆಮಿಯಲ್ಲಿ ಅವರು ಸುದ್ದಿಗೋಷ್ಠಿ ನಡೆಸಿದರು. ಹಿಂದೂಸ್ಥಾನಿ ಹಾಗೂ ಕರ್ನಾಟಕ ಸಂಗೀತ, ಭರತನಾಟ್ಯ, ಕಥಕ್, ಕೂಚುಪುಡಿ, ನೃತ್ಯ ರೂಪಕ, ಸಿತಾರ್ ಹಾಗೂ ವಚನ ಸಂಗೀತದ ಸಾಧಕರು, ಕಛೇರಿ ನಡೆಸಿಕೊಡಲಿದ್ದಾರೆ ಎಂದರು.

<><><>

ಖ್ಯಾತ ಸಾರಂಗಿ ನವಾಝ್, ಉಸ್ತಾದ ಫಯಾಜ್ ಖಾನ್ ಅವರ ಸಂಸ್ಮರಣಾರ್ಥ, ಧಾರವಾಡದ ಪರ್ವೀನ ಬೇಗಂ ಸ್ಮೃತಿ ಸಂಗೀತ ಮತ್ತು ಶಿಕ್ಷಣ ಟ್ರಸ್ಟ್, ಇಂದು ಸಂಜೆ 5.30ಕ್ಕೆ, ಧಾರವಾಡದ ಸೃಜನಾ ರಂಗಮಂದಿರದಲ್ಲಿ, ವಿಶೇಷ ಸಂಗೀತ ಕಾರ್ಯಕ್ರಮ ಹಾಗೂ ಪುಸ್ತಕ ಬಿಡುಗಡೆ ಆಯೋಜಿಸಿದೆ. ದಿವಂಗತ ಉಸ್ತಾದ ಫಯಾಜ್ ಖಾನ್ ಅವರ ಆತ್ಮಕಥೆ, 'ಸಾರಂಗಿ ನಾದದ ಬೆನ್ನೇರಿ' ಕೃತಿ ಬಿಡುಗಡೆಯಾಗಲಿದೆ.

<><><>

ಮುಖ್ಯ ಅಥಿತಿಗಳಾಗಿ ವಿಧಾನಸಭೆ ವಿಪಕ್ಷ ಉಪನಾಯಕ, ಅರವಿಂದ ಬೆಲ್ಲದ ಸೇರಿದಂತೆ ಪಂಡಿತ ಬಿ.ಎಸ್.ಮಠ, ಸೌಭಾಗ್ಯಾ ಕುಲಕರ್ಣಿ ಹಾಗೂ ಸಿ.ಯು.ಬೆಳ್ಳಕ್ಕಿ ಪಾಲ್ಗೊಳ್ಳಲಿದ್ದಾರೆ.

<><><>

ಪ್ರದೇಶ ಸಮಾಚಾರಕ್ಕಾಗಿ ಕೃತಿಯ ಕುರಿತು ಮಾಹಿತಿ ನೀಡಿದ್ದಾರೆ, ಪುಸ್ತಕದ ಸಂಪಾದಕ ಗಣೇಶ ಅಮಿನಗಡ.

<><><>

ಗಣೇಶ ಅಮಿನಗಡ ಧ್ವನಿ 40 ಸೆಕೆಂದುಗಳು

<><><>

ಮುಂಬೈ ಆಕಾಶವಾಣಿ ಕೇಂದ್ರದ ಆಡಳಿತಾಧಿಕಾರಿಯಾಗಿ, ನಿವೃತ್ತಿ ಹೊಂದಿದ್ದ, ಡಿ.ಎಲ್. ಶೆಟ್ಟಿ, ನಿಧನರಾಗಿದ್ದಾರೆ. ಅವರಿಗೆ 87 ವರ್ಷ ವಯಸ್ಸಾಗಿತ್ತು. ಅವರು ಮೂಲತಃ ಕಾರವಾರ ಜಿಲ್ಲೆ, ಅಂಕೋಲಾದವರು. ಆಕಾಶವಾಣಿ ಕಲಬುರಗಿ ಕೇಂದ್ರದಲ್ಲಿ 8 ವರ್ಷಗಳ ಕಾಲ ಅವರು, ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಸಂತ ಶ್ರೀ ಸೇವಾಲಾಲ್ ಜಯಂತಿ ಕಾರ್ಯಕ್ರಮವನ್ನು, ರಾಜ್ಯದೆಲ್ಲೆಡೆ ಶ್ರದ್ಧಾ, ಭಕ್ತಿಯಿಂದ ಆಚರಿಸಿದ ವರದಿಗಳು ಬಂದಿವೆ.

<><><>

UG CET-2025 ಕ್ಕೆ ನೋಂದಣಿ ಹಾಗೂ ಅರ್ಜಿ ಸಲ್ಲಿಸಲು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಈ ತಿಂಗಳ 24ರ ವರೆಗೆ ವಿಸ್ತರಿಸಿದೆ.

<><><>

ಧಾರವಾಡ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ, 145 ವರ್ಷಗಳಷ್ಟು ಹಳೆಯದಾದ, ಕೌಟುಂಬಿಕ ಆಸ್ತಿ ಹಕ್ಕಿಗೆ ಸಂಬಂಧಿಸಿದ ಸಿವಿಲ್ ವ್ಯಾಜ್ಯವನ್ನು, ಇತ್ಯರ್ಥ ಪಡಿಸಿದೆ.

<><><>

ಕೇಂದ್ರ ವಾರ್ತಾ ಮತ್ತು ಪ್ರಸಾರ ಹಾಗೂ ರೈಲ್ವೆ ಖಾತೆ ಸಚಿವ, ಅಶ್ವಿನಿ ವೈಷ್ಣವ್, ಬೆಂಗಳೂರಿನಲ್ಲಿ, ರಾಜ್ಯದ ರೇಲ್ವೆ ಯೋಜನೆಗಳ ಪ್ರಗತಿ ಪರಿಶೀಲಿಸಿದರು.

<><><>

ಹಾಸನ ಜಿಲ್ಲೆಯಲ್ಲಿ ಕಾಡಾನೆ ಹಾವಳಿ ನಿಯಂತ್ರಿಸುವಲ್ಲಿ, ರಾಜ್ಯ ಸರ್ಕಾರ ವಿಫಲವಾಗಿದೆ ಎಂದು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

<><><>

ರಾಜ್ಯದ 486 ಅಮೃತ ರೈತ ಉತ್ಪಾದಕ ಸಂಸ್ಥೆಗಳಿಗೆ, ಒಟ್ಟು 20 ಕೋಟಿ ರೂಪಾಯಿ ಅನುದಾನ ಒದಗಿಸಲಾಗಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಮಂಡ್ಯದಲ್ಲಿ ತಿಳಿಸಿದ್ದಾರೆ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ಕೃಷಿ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ ತಾಲೂಕಿನ ಹಾಡೋನಹಳ್ಳಿಯ, ಕೃಷಿ ವಿಜ್ಞಾನ ಕೇಂದ್ರದಲ್ಲಿ ರೈತರಿಗಾಗಿ, ಅಟಲ್ ಭೂ ಜಲ್ ಯೋಜನೆ, ತರಬೇತಿ ಕಾರ್ಯಾಗಾರ ಜರುಗಿತು.

<><><>

ಮಂಡ್ಯ ಜಿಲ್ಲೆಯ, ಸಕ್ಕರೆ ಕಾರ್ಖಾನೆಗಳು, ಮುಂದಿನ 14 ದಿನದೊಳಗಾಗಿ ರೈತರಿಗೆ ಕಬ್ಬಿನ ಹಣ ಪಾವತಿಸುವಂತೆ, ಜಿಲ್ಲಾಧಿಕಾರಿ ಕುಮಾರ ಆದೇಶಿಸಿದ್ದಾರೆ.

<><><>

ಹುಬ್ಬಳ್ಳಿಯ ಚಿಟಗುಪ್ಪಿ ಆಸ್ಪತ್ರೆಗೆ, ವಿಧಾನ ಪರಿ ‘ತ್ ಮುಖ್ಯ ಸಚೇತಕ ಸಲೀಂ ಅಹಮದ ಅವರು ಭೇಟಿ ನೀಡಿದ್ದರು.

<><><>

ರಾಜ್ಯಾದ್ಯಂತ ವಿವಿಧ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಾತಿಗೆ, ಸಾಮಾನ್ಯ ಪ್ರವೇಶ ಪರೀಕ್ಷೆ ಸುಗಮವಾಗಿ ಜರುಗಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮಲೆನಾಡಿನ ಮಂಗನ ಕಾಯಿಲೆ; ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ, ಲಸಿಕೆ ಸಂಶೋಧನೆ, ಪ್ರಗತಿಯಲ್ಲಿ.
- ‘ಹೆಣ್ಣು ಮಗು ಉಳಿಸಿ, ಮಗಳನ್ನು ಓದಿಸಿ’ ಕೇಂದ್ರ ಪುರಸ್ಕೃತ ಯೋಜನೆಗೆ, ದಶಕ ಪೂರ್ಣ.
- ಲೋಕಾಯುಕ್ತಕ್ಕೆ, ಕಳೆದ 2 ವ ‘ಗಳಲ್ಲಿ, 23 ಸಾವಿರ ದೂರುಗಳ ಸಲ್ಲಿಕೆ.
- 23 ರಂದು, ಗುಲ್ಬರ್ಗಾ ವಿಶ್ವವಿದ್ಯಾಲಯದ, ಅಂಬೇಡ್ಕರ್ ಭವನದಲ್ಲಿ, ರಾಷ್ಟ್ರೀಯ ಸಂಗೀತ, ನೃತ್ಯ ಮಹೋತ್ಸವ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>